ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕಾ ಮಂತ್ರಿ ವಿದ್ಯುಚ್ಛಕ್ತಿ ಸಚಿವರು).—

ಅ) ೯೭

ಆ) ೧೫

ಗೋಮಾಳಗಳ ರಕ್ಷಣೆ ಬಗ್ಗೆ.

೬೧೮. ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅರಣ್ಯ ಇಲಾಖೆಯವರು ಸರ್ಕಾರಿ ಜಮೀನುಗಳಲ್ಲಿ ನೀಲಗಿರಿ ಮರ ಬೆಳೆಸುವ ಕಾರ್ಯಕ್ರಮ ಕೈಗೊಂಡು ಗೋಮಾಳಗಳು ಇಲ್ಲದೆ ಮೇವಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಆ) ಹಾಗಿದ್ದಲ್ಲಿ ಗೋಮಾಳಗಳನ್ನು ದನಕರುಗಳ ಉಪಯೋಗಕ್ಕೆ ಬಿಟ್ಟು ಕೊಡಲು ಸರ್ಕಾರದವರು ಆದಷ್ಟು ಬೇಗ ಕ್ರಮಕೈಗೊಳ್ಳಲು ಆದೇಶ ನೀಡುತ್ತೀರಾ ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಏಲಕ್ಕಿ ಗೇಣಿಮಲೆ ಬಗ್ಗೆ

೬೬೯. ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ),— ಮಾನ್ಯ ಅರಣ್ಯ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೫ನೇ ಸಾಲಿನ ಬಜೆಟ್ ಅಧಿವೇಶನದಲ್ಲಿ ಹಿಂದಿನ ಅರಣ್ಯ ಮಂತ್ರಿಗಳು ಏಲಕ್ಕಿ ಸಾಗಂವಳಿ ಗೇಣಿ ಮಲೆಗಳಿಂ ಈ ಹಿಂದೆ ಗೇಣಿದಾರರಿಗೆ ಪುನಃ ಗೇಣಿಗೆ ಕೊಡುತ್ತೇವೆಂದು ಸದನದಲ್ಲಿ ಹೇಳಿಕೆ ಕೊಟ್ಟ ಪ್ರಕಾರ ಗೇಣಿದಾರರಿಗೆ ಈ ಮಲೆಗಳನ್ನು ಗೇಣಿಗೆ ಕೊಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಎಷ್ಟು ಎಕರೆ ಗೇಣಿ ಮಲೆಯನ್ನು ಎಷ್ಟು ಜನ ಗೇಣಿದಾರರಿಗೆ ಕೊಡಲಾಗಿದೆ?

ಇ) ಇಲ್ಲದಿದ್ದಲ್ಲಿ ಅದಕ್ಕೆ ಕಾರಣವೇನಂ ?

ಈ) ಇದರಲ್ಲಿ ಮಾಜಿ ಸೈನಿಕರಿಗೆ ಸಹ ಗೇಣಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದು ಅವರಿಗೆ ಕೊಡದಿರಲು ಕಾರಣವೇನು ?

ಶ್ರೀ ಜೆ. ಎಸ್. ದೇಶ್‌ಮುಖ್ (ಅರಣ್ಯ, ಗಣಿ ಮಂತ್ರಿ ಭೂ ವಿಜ್ಞಾನ ಮಂತ್ರಿಗಳು).—

ಅ) ಏಲಕ್ಕಿ ಬೆಳೆ ಬೆಳೆಯಲು ೨೧ ವರ್ಷದ ಗುತ್ತಿಗೆ ನಂತರ optional clause for renewal'' ಇದ್ದಲ್ಲಿ ಪ್ರಕರಣಗಳನ್ನು ಪುನಃ ಗುತ್ತಿಗೆ ನೀಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಮತ್ತು ಇ) ಈ ವಿಷಯದಲ್ಲಿ ಹಿಂದೆ ಗುತ್ತಿಗೆ ಪಡೆದವರ ಪೈಕಿ ಅನೇಕರು ನವೀಕರಣ ಮಾಡಬೇಕೆಂದು ಮತ್ತು ಗುತ್ತಿಗೆ ದರ ನಿಗದಿತ ಬೆಲೆಗಿಂತ ಕಡಿಮೆ ಮಾಡಬೇಕೆಂದು ನ್ಯಾಯಾಲಯಕ್ಕೆ ಹೋಗಿರುವುದರಿಂದ ಈ ನವೀಕರಣದ ಬಗ್ಗೆ ಪ್ರಸಂಗಗಳು ಇನ್ನೂ ಪರಿಶೀಲನೆಯುಲ್ಲಿದೆ. ಈವರೆಗೆ ಹಿಂದೆ ಗುತ್ತಿಗೆ ಪಡೆದವರನ್ನು ಹೊರಹಾಕಿಲಾಗಿಲ್ಲ.

ಈ) ಹೊಸದಾಗಿ ಅರಣ್ಯದಲ್ಲಿ ಗೇಣಿ ಕೊಡುವ ಪ್ರಸಂಗವು ಅರಣ್ಯ ಸಂರಕ್ಷಣೆ ೧೯೮೦ರ ಕಾಯಿದೆಗೆ ಒಳಪಟ್ಟಿರುವುದರಿಂದ ಇಂತಹ ಪ್ರಸಂಗಗಳು ಸದ್ಯಕ್ಕೆ ಉದ್ಭವಿಸಿರುವುದಿಲ್ಲ.